# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

ಸಿ. ಸಿ. ಸಂಖ್ಯೆ **786/2013** ಸಿ.ಡಬ್ಲ್ಯೂ **16** / ಪಿ.ಡಬ್ಲ್ಯೂ **02**

| | | |
|---|---|---|
| ಸಾಕ್ಷಿಯ ಹೆಸರು | - ಬಿ.ಎಸ್ ತಳವಾರ್ | ದಿನಾಂಕ 13-08-2024 |
| ತಂದೆಯ ಹೆಸರು | - ತಳವಾರ್ ಶಿವಪ್ಪ | ರಂದು ಪ್ರಮಾಣ ವಚನ |
| ವಯಸ್ಸು | - 58 ವರ್ಷ | ಮಾಡಿಸಲಾಯಿತು. |
| ಉದ್ಯೋಗ | - ಡಿ.ಎಸ್.ಪಿ, ಸಿಂಧನೂರು ಉಪವಿಭಾಗ | |
| ವಾಸ ಸ್ಥಳ | - ಸಿಂಧನೂರು | |

## ಕಲಂ 299 ರಡಿಯಲ್ಲಿ ಮುಖ್ಯ ವಿಚಾರಣೆ ಸಸಅ ರವರಿಂದ

* * * *

ನಾನು 1996 ರಿಂದ 2001 ರವರೆಗೆ ಗಾದಿಗನೂರು ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 30-09-1998 ರಂದು ರಾತ್ರಿ 8-00 ಗಂಟೆಗೆ ಚಾ.ಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಆಧಾರದ ಮೇಲೆ ಗುನ್ನೆ ನಂಃ 139/1998 ರ ಪ್ರಕಾರ ದಾಖಲಿಸಿ ಪ್ರ.ವ.ವ ಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿಃ 01-10-1998 ರಂದು ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡಿದ್ದ ಒಟ್ಟು 6 ಲಾರಿಗಳನ್ನು ಚಾ.ಸಾ 2 ರವರು ಹಾಜರುಪಡಿಸಿದ ಆಧಾರದ ಮೇಲೆ ಗಾದಿಗನೂರು ಪೊಲೀಸ್ ಠಾಣೆ ಆವರಣದಲ್ಲಿ ಚಾ.ಸಾ 9 ಮತ್ತು 10 ರವರ ಸಮಕ್ಷಮ ಜಪ್ತುಪಂಚನಾಮೆಯನ್ನು ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 2-30 ಗಂಟೆಯವರೆಗೆ ಮಾಡಿರುತ್ತೇನೆ. ತದ ನಂತರ ಪಂಚರ ಸಮಕ್ಷಮ ಲಾರಿಗಳ ನಂಬರ್ 1) ಟಾಟಾ ಕಂಪೆನಿಯ ಲಾರಿ ಚಾಸಿ ನಂಃ 360324/ಎಫ್.ಕ್ಯೂ-71728, 2) ಲಾರಿ ಟಾಟಾ ಕಂಪೆನಿಯ ಲಾರಿ ಚಾಸಿ ನಂಃ 360324/ಜಿ.ವಿ.ಕ್ಯೂ-718262, 3) ಟಾಟಾ ಕಂಪೆನಿಯ ಲಾರಿ ಚಾಸಿ ನಂಃ 360324/ಎ.ವಿ.ಕ್ಯೂ-702363, 4) ಟಾಟಾ ಕಂಪೆನಿಯ ಲಾರಿ ಚಾಸಿ ನಂಃ 360324/ಹೆಚ್.ವಿ.ಕ್ಯೂ-720630, 5) ಟಾಟಾ ಕಂಪೆನಿಯ ಲಾರಿ ಚಾಸಿ ನಂಃ 360324/ಸಿ.ವಿ.ಕ್ಯೂ-708991 ಮತ್ತು 6) ಟಾಟಾ ಕಂಪೆನಿಯ ಲಾರಿ ಚಾಸಿ ನಂಃ 360324/ಬಿ.ವಿ.ಕ್ಯೂ-705393 ನೇದ್ದವುಗಳನ್ನು ಜಪ್ತುಪಡಿಸಿಕೊಂಡಿರುತ್ತೇನೆ. ಮೇಲ್ಕಾಣಿಸಿದ ಲಾರಿಗಳಲ್ಲಿ ಹೆಚ್.ಬಿ ಸ್ಪಾಂಜ್ ಐರನ್ ಚಿಟ್ಸ್ ಲೋಡ್ ಮಾಡಿಕೊಂಡು ಬಂದಿದ್ದು ಆಗ ಸದರಿ ಲಾರಿಗಳನ್ನು ತೂಕ ಮಾಡಿಸಿದ್ದು ಇರುತ್ತದೆ. ಅವುಗಳಲ್ಲಿ 1 ನೇ ಲಾರಿಯಲ್ಲಿ ಒಟ್ಟು 28,191 ಕೆ.ಜಿ ಲೋಡ್ ಇದ್ದು, 2 ನೇ ಲಾರಿಯಲ್ಲಿ ಒಟ್ಟು 26,030 ಕೆ.ಜಿ ಲೋಡ್ ಇದ್ದು, 3 ನೇ ಲಾರಿಯಲ್ಲಿ ಒಟ್ಟು 14,120 ಕೆ.ಜಿ ಲೋಡ್

ಇದ್ದು, 4 ನೇ ಲಾರಿಯಲ್ಲಿ ಒಟ್ಟು 13,940 ಕೆ.ಜಿ ಲೋಡ್ ಇದ್ದು, 5 ನೇ ಲಾರಿಯಲ್ಲಿ ಒಟ್ಟು 50,000 ಕೆ.ಜಿ ಲೋಡ್ ಇದ್ದು, 6 ನೇ ಲಾರಿಯಲ್ಲಿ ಒಟ್ಟು 27,630 ಕೆ.ಜಿ ಲೋಡ್ ಇದ್ದು ಅದನ್ನು ನಾವು ಜಪ್ತುಪಡಿಸಿಕೊಂಡಿರುತ್ತೇವೆ. ಸದರಿ ಲಾರಿಗಳನ್ನು ಲೋಡ್ ಸಮೇತ ನಮ್ಮ ಠಾಣೆಗೆ ಹಾಜರುಪಡಿಸಿದ್ದು ಅವುಗಳಿಗೆ ಸಂಬಂಧಿಸಿದಂತೆ ಜಪ್ತುಪಂಚನಾಮೆಯನ್ನು ಮಾಡಿರುತ್ತೇವೆ. ಸ್ಯಾಂಪಲ್ ಗಾಗಿ ಒಂದೊಂದು ಲಾರಿಯಲ್ಲಿ ಒಂದು ಹಿಡಿಯಷ್ಟು ಐರನ್ ಚಿಟ್ಸ್ ತೆಗೆದುಕೊಂಡಿರುತ್ತೇವೆ ಮತ್ತು ಅದನ್ನು ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ಬಿಳಿ ಬಟ್ಟೆಯಲ್ಲಿ ಸೀಜ್ ಮಾಡಿ ಅದಕ್ಕೆ ನಾವು ಸಹಿ ಮಾಡಿ ಅದರ ಮೇಲೆ ಚೀಟಿಯನ್ನು ಅಂಟಿಸಿರುತ್ತೇವೆ. ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡಿದ್ದ ಲಾರಿಗಳು ಮತ್ತು ಸ್ಪಾಂಜ ಐರನ್ ಚಿಟ್ಸ್ ಗೆ ಸಂಬಂಧಿಸಿದಂತೆ ಪಿ.ಎಫ್ ನಂಃ 129/1998 ರ ಪ್ರಕಾರ ಸ್ವತ್ತಿನ ಪಟ್ಟಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ.

ದಿಃ 02-10-1998 ರಂದು ಬಾಲಕೋಟೆ ಜಿಲ್ಲೆ ಹುನಗುಂದ ಹೊರ ವಲಯದಲ್ಲಿ ಎನ್.ಹೆಚ್-13 ಮುಖ್ಯ ರಸ್ತೆಯಲ್ಲಿ ನ್ಯೂ ಶೇರ್ ಪಂಜಾಬಿ ಡಾಬಾದ ಬಳಿ ಚಾ.ಸಾ 7 ಮತ್ತು 8 ರವರ ಸಮಕ್ಷಮ ಬೆಳಿಗ್ಗೆ 8-00 ರಿಂದ ಸಂಜೆ 7-30 ಗಂಟೆಯವರೆಗೆ ಜಪ್ತುಪಂಚನಾಮೆಯನ್ನು ಮಾಡಿರುತ್ತೇನೆ. ಆರೋಪಿತರು ತಮ್ಮ ಲಾರಿಗಳಲ್ಲಿ ತೆಗೆದುಕೊಂಡು ಬಂದಿದ್ದ ಐರನ್ ಚಿಟ್ಸ್ ಲೋಡ್ ನಲ್ಲಿ ಅರ್ಧದಷ್ಟು ಅನ್ಲೋಡ್ ಮಾಡಿದ್ದು ಮತ್ತು ಅದನ್ನು ಸದರಿ ಸ್ಥಳದಲ್ಲಿ ತೋರಿಸಿದ್ದು ಸದರಿ ಅನ್ಲೋಡ್ ಮಾಡಿದ ಸ್ಪಾಂಜರ್ ಐರನ್ ಚಿಟ್ಸ್ ಗೆ ಸಂಬಂಧಿಸಿದಂತೆ ಪಂಚನಾಮೆ ಮಾಡಿರುತ್ತೇನೆ. ತದ ನಂತರ ಠಾಣೆಗೆ ಬಂದು ಸದರಿ ಸ್ಪಾಂಜ ಐರನ್ ಚಿಟ್ಸ್ ಗೆ ಸಂಬಂಧಿಸಿದಂತೆ 131/1998 ರ ಪ್ರಕಾರ ಸ್ವತ್ತಿನ ಪಟ್ಟಿಯನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ತದ ನಂತರ ಆರೋಪಿತರ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಲಾರಿಗಳಲ್ಲಿ ಲೋಡ್ ಮಾಡಿಕೊಂಡು ಬಂದಿದ್ದ ಸ್ಪಾಂಜ ಐರನ್ ಚಿಟ್ಸ್ ಗೆ ಸಂಬಂಧಿಸಿದಂತೆ ಫಿರ್ಯಾದಿಯಿಂದ ದಾಖಲೆಗಳನ್ನು ಪಡೆದಿರುತ್ತೇನೆ.

ಚಾ.ಸಾ 2 ರವರ ಹೇಳಿಕೆ ಮತ್ತು ಮರು ಹೇಳಿಕೆ ಪಡೆದಿರುತ್ತೇನೆ. ಚಾ.ಸಾ 4 ರಿಂದ 6 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡಿದ್ದ ಲಾರಿಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಆರ್.ಟಿ.ಓ ರವರಿಂದ ಪಡೆದಿರುತ್ತೇನೆ. ಆರೋಪಿತರ ಸ್ವಖುಷಿ ಹೇಳಿಕೆಗಳನ್ನು ಪಡೆದಿರುತ್ತೇನೆ. ತದ ನಂತರ ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ಧ ದೋಷಾರೋಪಣೆ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸಸಅ ರವರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರ.ದ.ನ್ಯಾ.ದಂ., ಸಂಡೂರು.**